# ಆಹಾರ ಪದಾರ್ಥಗಳ ದುರ್ಬಳಕೆಗೆ ಕಡಿವಾಣ ಹಸಿವಿನ ಸಮಸ್ಯೆಗೆ ಉತ್ತರ, ಪರಿಸರಕ್ಕೂ ಹಿತ

ಒಂದೆಡೆ, ಜಗತ್ತಿನ ಎಲ್ಲ ಭಾಗಗಳಲ್ಲೂ ಹಸಿವಿನ ಸಮಸ್ಯೆ ಜೀವಂತ. ಇನ್ನೊಂದೆಡೆ, ಅಪಾರ ಪ್ರಮಾಣದ ಆಹಾರ ಪದಾರ್ಥಗಳ ಪೋಲು. ಈ ವೈರುಧ್ಯವನ್ನು ಅಂಕಿಅಂಶಗಳು ಕಟ್ಟಿಕೊಡುವುದು ಹೀಗೆ: 2022ರ ಒಟ್ಟು ಉತ್ಪಾದನೆಯಲ್ಲಿ ಶೇ. 19ರಷ್ಟು (10.50 ಸಾವಿರ ಕೋಟಿ ಟನ್) ಆಹಾರ ಪದಾರ್ಥಗಳು ಬಳಕೆದಾರರ ಕೈಸೇರದೆ ವ್ಯರ್ಥವಾಗಿವೆ. ಇದೇ ಅವಧಿಯಲ್ಲಿ ವಿಶ್ವದ ವಿವಿಧ ಭಾಗಗಳಲ್ಲಿ 78.3 ಕೋಟಿ ನಾಗರಿಕರು ತೀವ್ರ ಹಸಿವಿನಿಂದ ಬಳಲಿದ್ದಾರೆ.

ವಿಶ್ವಸಂಸ್ಥೆ ಇತ್ತೀಚೆಗೆ ಬಿಡುಗಡೆ ಮಾಡಿರುವ 'ಆಹಾರ ಪೋಲು ಸೂಚ್ಯಂಕ'ದಲ್ಲಿನ ಅಂಕಿಅಂಶಗಳು ಅಚ್ಚರಿ ಹಾಗೂ ಆಘಾತ ಎರಡನ್ನೂ ಉಂಟುಮಾಡುವಂತಿವೆ. 2022ರಲ್ಲಿ ವ್ಯರ್ಥವಾದ ಆಹಾರದ ಪ್ರಮಾಣವು ವಿಶ್ವದಲ್ಲಿನ ಹಸಿವನ್ನು ತಣಿಸಲು ಅಗತ್ಯವಿರುವುದಕ್ಕಿಂತಲೂ ನಾಲ್ಕು ಪಟ್ಟು ಹೆಚ್ಚು ಎನ್ನುವ ಅಂದಾಜಿದೆ. ಪೋಲಾದ ಪದಾರ್ಥಗಳ ಸಮರ್ಪಕ ಬಳಕೆ ಸಾಧ್ಯವಾಗಿದ್ದಿದ್ದರೆ, ಹಸಿವಿನಿಂದ ಬಳಲುವ ಪ್ರತಿ ವ್ಯಕ್ತಿಗೆ 132 ಕೆ.ಜಿ. ಆಹಾರ ದೊರೆಯುತ್ತಿತ್ತು. ಮನೆಗಳ ಹಂತದಲ್ಲಿ, ಅಂದರೆ ಕುಟುಂಬಗಳಲ್ಲಿಯೇ ಆಹಾರದ ಪೋಲು ಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿದೆ ಎಂದು ಹೇಳಲಾಗಿದೆ. ಆಹಾರದ ಪೋಲನ್ನು ತಡೆಗಟ್ಟಿದರೆ ಹಸಿವೆಯ ಸಮಸ್ಯೆಯೂ ನಿವಾರಣೆಯಾಗುತ್ತದೆ ಎನ್ನುವುದು, ಒಂದಲ್ಲಾ ಒಂದು ಬಗೆಯಲ್ಲಿ ಆಹಾರ ಪದಾರ್ಥಗಳನ್ನು ವ್ಯರ್ಥ ಮಾಡುವವರಿಗೆ ಪಾಪಪ್ರಜ್ಞೆ ಹುಟ್ಟಿಸಬೇಕು.

ಆಹಾರದ ಪೋಲನ್ನು ಹಸಿವಿನ ಸಮಸ್ಯೆಯ ದೃಷ್ಟಿಯಿಂದಷ್ಟೇ ನೋಡಲಾಗದು. ಆಹಾರ ಪದಾರ್ಥಗಳನ್ನು ಸರಿಯಾಗಿ ಬಳಸದ ಮನೋಭಾವ ಪರಿಸರದ ಮೇಲೂ ಗಂಭೀರ ಪರಿಣಾಮ ಉಂಟುಮಾಡುತ್ತಿದೆ. ರೈತರ ಶ್ರಮ ಹಾಗೂ ಪ್ರಾಕೃತಿಕ ಸಂಪನ್ಮೂಲಗಳ ಬಳಕೆಯಿಂದ ಉತ್ಪಾದನೆಗೊಳ್ಳುವ ಆಹಾರ ಪದಾರ್ಥಗಳನ್ನು ಪೋಲು ಮಾಡುವುದರಿಂದ, ಸಂಪತ್ತಿನ ಅಪವ್ಯಯ ಆದಂತಾಗುತ್ತದೆ, ಬೆವರಿನ ಸಂಸ್ಕೃತಿಯನ್ನು ಅಗೌರವಿಸಿದಂತಾಗುತ್ತದೆ. ಆಹಾರದ ಪೋಲು ತಡೆಗಟ್ಟಿದಲ್ಲಿ, ಹಸಿರುಮನೆ ಮೇಲೆ ಪರಿಣಾಮ ಉಂಟುಮಾಡುವ ಅನಿಲಗಳ ಪ್ರಮಾಣವನ್ನು ಶೇ. 8ರಿಂದ 10ರಷ್ಟು ತಗ್ಗಿಸಬಹುದಾಗಿದೆ. ಕೃಷಿ ಉತ್ಪನ್ನಗಳ ಸಾಗಾಣಿಕೆಗೆ ಕೂಡ ಸಂಪನ್ಮೂಲಗಳು ಬೇಕು ಹಾಗೂ ಆ ಪ್ರಕ್ರಿಯೆ ಕೂಡ ಪರಿಸರದ ಮೇಲೆ ಹಾನಿ ಉಂಟುಮಾಡುವಂತಹದ್ದೇ ಆಗಿದೆ. ಇದ್ಯಾವ ಸಂಗತಿಯನ್ನೂ ಗಮನಿಸದೆ ಆಹಾರವನ್ನು ಹಾಳು ಮಾಡುವ ಪ್ರವೃತ್ತಿ ಬಲಗೊಳ್ಳುತ್ತಲೇ ಇರುವುದು ಕಳವಳಕಾರಿ.

ಆರ್ಥಿಕ ಅಭಿವೃದ್ಧಿಗೂ ಆಹಾರ ಪದಾರ್ಥಗಳ ದುರ್ಬಳಕೆಗೂ ಸಂಬಂಧವಿದೆ. ಅನಗತ್ಯ ವಸ್ತುಗಳ ಸಂಗ್ರಹಕ್ಕೆ ಉತ್ತೇಜನ ನೀಡುವ ಕೊಳ್ಳುಬಾಕ ಸಂಸ್ಕೃತಿಯೇ, ಅವಶ್ಯಕತೆಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಪದಾರ್ಥಗಳನ್ನು ಕೊಳ್ಳುವುದಕ್ಕೂ ಪ್ರೇರಣೆಯಾಗಿದೆ. ನಾಗರಿಕತೆಯ ನಾಜೂಕುತನದ ಭ್ರಮೆ ಕೂಡ ಆಹಾರ ಪದಾರ್ಥಗಳ ಪೋಲಿಗೆ ಕಾರಣಗಳಲ್ಲೊಂದಾಗಿದೆ. ಮದುವೆ ಸೇರಿದಂತೆ ಸಾರ್ವಜನಿಕ ಸಮಾರಂಭಗಳಲ್ಲಿ ವ್ಯರ್ಥವಾಗುವ ಆಹಾರದ ಪ್ರಮಾಣ ಗಾಬರಿಹುಟ್ಟಿಸುವಂತಿರುತ್ತದೆ. ಹಲವು ವೇಳೆ ಆಡಂಬರ ಪ್ರದರ್ಶನದ ಒತ್ತಡಕ್ಕೊಳಗಾಗಿ, ಜನಸಾಮಾನ್ಯರು ಕೂಡ ಆಹಾರದ ದುಂದುಗಾರಿಕೆಯಲ್ಲಿ ಭಾಗಿಯಾಗುತ್ತಾರೆ. ಇಂತಹ ಪೋಲನ್ನು ಪ್ರಜ್ಞಾಪೂರ್ವಕವಾಗಿ ತಪ್ಪಿಸದೆ ಹೋದರೆ, ಹಸಿವಿನ ಸಮಸ್ಯೆ ಉಲ್ಬಣಗೊಳ್ಳುವುದಕ್ಕೆ ಹಾಗೂ ಪರಿಸರ ಮಾಲಿನ್ಯಕ್ಕೆ ಉತ್ತೇಜನ ನೀಡಿದಂತಾಗುತ್ತದೆ.

ಅಭಿವೃದ್ಧಿಪಥದತ್ತ ದಾಪುಗಾಲಿಡುತ್ತಿರುವ ಭಾರತದಂತಹ ದೇಶಗಳು ಆಹಾರದ ಪೋಲನ್ನು ತಡೆಗಟ್ಟುವ ನಿಟ್ಟಿನಲ್ಲಿ ಹೆಚ್ಚು ಜವಾಬ್ದಾರಿಯಿಂದ ವರ್ತಿಸಬೇಕು. ಹೆಚ್ಚಿನ ಜನಸಂಖ್ಯೆ ಹೊಂದಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಕೃಷಿ ಉತ್ಪನ್ನಗಳ ಪರಿಣಾಮಕಾರಿ ಬಳಕೆ ಅತ್ಯಗತ್ಯ. ಸಾಮೂಹಿಕ ಪ್ರಯತ್ನದಿಂದಷ್ಟೇ ಆಹಾರದ ಪೋಲನ್ನು ತಡೆಗಟ್ಟಬಹುದಾಗಿದೆ. ಈ ನಿಟ್ಟಿನಲ್ಲಿ ಸರ್ಕಾರಗಳು, ಸ್ವಯಂ ಸೇವಾಸಂಸ್ಥೆಗಳು, ಉದ್ಯಮಗಳು, ರೈತರು ಹಾಗೂ ರೈತ ಸಂಘಟನೆಗಳು ಒಟ್ಟಾಗಿ ಕೆಲಸ ಮಾಡಬೇಕಾದ ಅಗತ್ಯವಿದೆ ಎಂದು ವಿಶ್ವಸಂಸ್ಥೆ ಅಭಿಪ್ರಾಯಪಟ್ಟಿದೆ. ಈ ಪ್ರಕ್ರಿಯೆಯಲ್ಲಿ ಸಾರ್ವಜನಿಕರ ಸಹಭಾಗಿತ್ವವೂ ಅತ್ಯಗತ್ಯ. ವ್ಯಕ್ತಿ ನೆಲೆಯಲ್ಲಿ 'ಆಹಾರದ ಶಿಸ್ತು' ಸಾಧ್ಯವಾದರೆ, ಸಮಷ್ಟಿ ನೆಲೆಯಲ್ಲಿ ಪೋಲನ್ನು ತಡೆಗಟ್ಟಬಹುದಾಗಿದೆ.

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಆಹಾರಕ್ಕೆ ದೈವದ ಸ್ಥಾನವಿದೆ. ಅನ್ನವನ್ನು 'ಅನ್ನಪೂರ್ಣೆ' ಎಂದು ನಂಬಲಾಗುತ್ತದೆ. ಅಗತ್ಯಕ್ಕಿಂತಲೂ ಹೆಚ್ಚಿನ ಅಕ್ಕಿಯನ್ನು ಸಂಗ್ರಹಿಸಿ ತಂದ ಮಾರಯ್ಯನನ್ನು, 'ಈಸಕ್ಕಿಯಾಸೆ ನಿಮಗೇಕೆ?' ಎಂದು ಪ್ರಶ್ನಿಸಿದ ಲಕ್ಕಮ್ಮನ ಪರಂಪರೆ ನಮ್ಮ ಬೆನ್ನಿಗಿದೆ. ಅಗತ್ಯಕ್ಕಿಂತಲೂ ಹೆಚ್ಚಿನದರ ಸಂಗ್ರಹವನ್ನು ಪಾಪದ ರೂಪದಲ್ಲಿ ಭಾವಿಸಿದ ವಚನಕಾರರ ಮಾದರಿಯಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆಯಿದ್ದು, ಅದು ಈಗಲೂ ಪ್ರಸ್ತುತವಾಗಿದೆ. ಅನ್ನದ ಬಗೆಗಿನ ಗೌರವ ಮಾತಿನ ರೂಪದಲ್ಲಷ್ಟೇ ಉಳಿಯುವುದು ಆಹಾರ ವ್ಯರ್ಥವಾಗಲಿಕ್ಕೆ ಕಾರಣವಾಗುತ್ತದೆ. ಆಹಾರ ಪದಾರ್ಥಗಳನ್ನು ಸಮರ್ಪಕವಾಗಿ ಬಳಸುವ ಪರಿಪಾಟ ಮನೆಗಳಿಂದಲೇ ಶುರುವಾಗಬೇಕು. ಇಲ್ಲದೆ ಹೋದರೆ, ಹಸಿದ ಹೊಟ್ಟೆಗಳ ಹೆಚ್ಚಳ ಹಾಗೂ ಪರಿಸರದಲ್ಲಿನ ಅಸಮತೋಲನಕ್ಕೆ ನಾವೆಲ್ಲರೂ ಕಾರಣರಾಗುತ್ತಲೇ ಹೋಗುತ್ತೇವೆ.

■ ರಘುನಾಥ ಚ.ಹ.

ಆರ್ಥಿಕ ಅಭಿವೃದ್ಧಿಗೂ ಆಹಾರ ಪದಾರ್ಥಗಳ ದುರ್ಬಳಕೆಗೂ ಸಂಬಂಧವಿದೆ. ಅನಗತ್ಯ ವಸ್ತುಗಳ ಸಂಗ್ರಹಕ್ಕೆ ಉತ್ತೇಜನ ನೀಡುವ ಕೊಳ್ಳುಬಾಕ ಸಂಸ್ಕೃತಿಯೇ, ಅವಶ್ಯಕತೆಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಪದಾರ್ಥಗಳನ್ನು ಕೊಳ್ಳುವುದಕ್ಕೂ ಪ್ರೇರಣೆಯಾಗಿದೆ.



ಈಶ್ವರ್